## ಪ್ರಿನ್ಸಿಪಾಲ್ ಜತೆಗೆ ಚರ್ಚೆ

ರಮ್ಯ ಸುತ್ತಮುತ್ತಲೂ ನೋಡಿದಳು. ಮತ್ತೆ ಯಾರೂ ಕಾಣಲಿಲ್ಲ. ಈ ವಿಷಯವನ್ನು ಗೆಳತಿಗೆ ಹೇಳುವುದಕ್ಕೆ ಇದೇ ಸೂಕ್ತ ಸಮಯವೆನಿಸಿತು.

ಋತು....ನಾನೊಂದು ವಿಷ್ಯವನ್ನು ನಿಂಗೆ ಹೇಳ್ಬೇಕು, ಆದ್ರೆ ಈಗ್ಲೇ ಹೇಳ್ತಿದೀನಿ, ಹೆದರ್ಬೇಡ, ಧೈರ್ಯವಾಗಿರೋದಾದ್ರೆ ಮಾತ್ರಾ ಹೇಳ್ತೀನಿ....

ಗೆಳತಿಯ ಒಗಟಿನಂತಹ ಮಾತಿಗೆ ಚಕಿತಳಾದಳು ಋತು. ಏನು ಹೇಳುತ್ತಿದ್ದಾಳೆ ಇವಳು?....ತಾನು ಧೈರ್ಯವನ್ನು ಕಳೆದುಕೊಳ್ಳುವಂತಹ ಅದ್ಯಾವ ವಿಷಯವನ್ನು ಇವಳು ಹೇಳಬಹುದು?..ಗೊಂದಲವೆನಿಸಿತು.

ಋತು....ಯಾರೋ ನಿನ್ನನ್ನು ಫಾಲೋ ಮಾಡ್ತಿದ್ದಾರೆ ಕಣೇ, ನಾವು ಬಂಡೆಯ ಪಕ್ಕದಲ್ಲಿ ಮಾತಾಡೋವಾಗ ನೀಲಿ ಟೀ ಶರ್ಟ್ ಧರಿಸಿದ್ದ ವ್ಯಕ್ತಿಯೊಂದು ನಮ್ಮ ಮಾತುಗಳನ್ನು ಕೇಳ್ತಿತ್ತು, ಅದಕ್ಕೆ ನಿನ್ನನ್ನು ಮಾತಾಡದಂತೆ ತಡೆದದ್ದು....

ಗೆಳತಿಯ ಈ ಅನಿರೀಕ್ಷಿತವಾದ ಮಾತುಗಳಿಂದ ಋತು ನಿಜಕ್ಕೂ ಗಾಬರಿಯಾದಳು. ತನ್ನನ್ನು ಯಾರು

